(56)

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್ ಎಲ್ ಭೋಜೇಗೌಡ ಇವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ**

ಶಾಲಾ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ನೌಕರರ ಬೇಡಿಕೆ ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದಂತೆ 1967ರಿಂದ ಇಲಾಖೆಯಲ್ಲಿ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತ್ಯೇಕವಾಗಿ ಪರಿಷ್ಕರಣೆ, ಶಿಕ್ಷಕರಿಗೆ ವೇಳಾಪಟ್ಟಿ ನಿಗದಿಪಡಿಸಿ ಅನುಷ್ಠಾನಗೊಳಿಸುವ ಮಾದರಿಯಲ್ಲಿಯೇ ಇಲಾಖೆಯಲ್ಲಿ ಉದ್ಭವಿಸುವ ಬೋಧಕೇತರ ವೃಂದದ ಎಲ್ಲಾ ಖಾಲಿ ಹುದ್ದೆಗಳಿಗೆ ನಿಯಮಾನುಸಾರ ವರ್ಷಕ್ಕೆ ಎರಡು ಬಾರಿ ಮುಂಬಡ್ತಿ ನೀಡಲು ಹಾಗೂ ಬೋಧಕೇತರ ನೌಕರರ ವರ್ಗಾವಣೆ ಮಾಡಲು, ನೇಮಕಾತಿ ಹೊಂದಿನ ಹಾಗೂ ಮುಂಬಡ್ತಿ ಹೊಂದಿದ ಬೋಧಕೇತರ ನೌಕರರಿಗೆ ಆಡಳಿತಾತ್ಮಕ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಅಗತ್ಯವಿರುವ ವೃತ್ತಿ ಬುನಾದಿ, ಕಛೇರಿ ಕಾರ್ಯವಿಧಾನಗಳು, ನವೀಕರಿಸಿದ ಇಲಾಖಾ ನೀತಿ ನಿಯಮಗಳು ಹಾಗೂ ಡಿಜಿಟಲ್ (ಇ-ಆಫೀಸ್) ತಂತ್ರಾಂಶ ವ್ಯವಸ್ಥೆಗಳ ಕುರಿತು ಕಡ್ಡಾಯವಾಗಿ ಕಾಲಕಾಲಕ್ಕೆ ಸೂಕ್ತ ತರಬೇತಿ ನೀಡುವ, ಕಾರ್ಯನಿರ್ವಹಣಾ ವರದಿಗಳನ್ನು ಹಾಲಿ ಇರುವ ಅಧಿಕಾರಿಗಳು ಅಂಗೀಕರಿಸುವ ಹಾಗೂ ಇದಕ್ಕೆ ಸಂಬಂಧಿಸಿದಂತೆ ಇತರೆ ವಿಷಯಗಳ ಕುರಿತು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆಯಲು ಅನುಮತಿ ನೀಡುವಂತೆ ಕೋರುತ್ತೇನೆ.

**ಉತ್ತರ**

ಶಾಲಾ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ನೌಕರರ ಬೇಡಿಕೆ ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದಂತೆ 1967ರಿಂದ ಇಲಾಖೆಯಲ್ಲಿ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. ಹಾಗೂ ವರ್ಷಾವಾರು ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸಿ ಕಾಲ ಕಾಲಕ್ಕೆ ಉದ್ಭವವಾಗುವ ಬೋಧಕೇತರ ವೃಂದದ ಎಲ್ಲಾ ಹುದ್ದೆಗಳಿಗೆ ಮುಂಬಡ್ತಿ ನೀಡಲು ಕ್ರಮವಹಿಸಲಾಗುತ್ತಿದೆ.

ಬೋಧಕೇತರ ನೌಕರರ ವರ್ಗಾವಣೆಗಳನ್ನು ಕಾಲಕಾಲಕ್ಕೆ ಮಾರ್ಗಸೂಚಿಗಳನ್ವಯ ಕೇಂದ್ರೀಕೃತವಾಗಿ ವರ್ಗಾವಣಾ ಆನ್‌ಲೈನ್ ತಂತ್ರಾಂಶದ ಮೂಲಕ ಪಾರದರ್ಶಕ ಸಾರ್ವತ್ರಿಕ ವರ್ಗಾವಣೆಗೆ ಕ್ರಮವಹಿಸಲಾಗುತ್ತಿದೆ: ಇದರಿಂದ ಬೋಧಕೇತರ ಸಿಬ್ಬಂದಿಗಳು ಅವರ ಕೇಂದ್ರ ಸ್ಥಾನದಲ್ಲಿಯೇ ಕೌನ್ಸಿಲಿಂಗ್‌ಗೆ ಆನ್‌ಲೈನ್ ಮುಖಾಂತರ ಹಾಜರಾಗಿ ಸ್ಥಳ ಆಯ್ಕೆಯನ್ನು ಮಾಡಿಕೊಳ್ಳಬಹುದಾಗಿರುತ್ತದೆ.

ನೇಮಕಾತಿ ಹೊಂದಿದ ಹಾಗೂ ಮುಂಬಡ್ತಿ ಹೊಂದಿದ ಬೋಧಕೇತರ ನೌಕರರಿಗೆ ಕಛೇರಿ ಕಾರ್ಯವಿಧಾನಗಳು, ವೃತ್ತಿ ಬುನಾದಿ, ನವೀಕರಿಸಿದ ಇಲಾಖಾ ನೀತಿ-ನಿಯಮಗಳ ಕುರಿತಂತೆ ಗ್ರೂಪ್ ಎ, ಬಿ ವೃಂದದ ನೌಕರರಿಗೆ ಆಡಳಿತ ತರಬೇತಿ ಸಂಸ್ಥೆ, ಮೈಸೂರು ಹಾಗೂ ವಿತ್ತೀಯ ಕಾರ್ಯ ನೀತಿ ಸಂಸ್ಥೆ, ಬೆಂಗಳೂರು ರವರಿಂದ ಹಾಗೂ ಗ್ರೂಪ್ ಸಿ ವೃಂದದ ನೌಕರರಿಗೆ ಆಯಾ ಜಿಲ್ಲಾ ತರಬೇತಿ ಕೇಂದ್ರಗಳ ಮೂಲಕ ಕಾಲಕಾಲಕ್ಕೆ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಡಿಜಿಟಲ್ (ಇ-ಆಫೀಸ್) ತಂತ್ರಾಂಶದ ಕುರಿತು ಆಯುಕ್ತಾಲಯದ ಸಂಪನ್ಮೂಲ ವ್ಯಕ್ತಿಗಳಿಂದ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಲಭ್ಯ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಲಾಗಿರುತ್ತದೆ. ಹಾಗೂ ಕಾರ್ಯನಿರ್ವಹಣಾ ವರದಿಗಳನ್ನು ಆದೇಶ ಸಂಖ್ಯೆ ಇಡಿ 127 ಡಿಎಆರ್ 2018, ದಿನಾಂಕ:24.08.2018 ರನ್ವಯ ಅಂಗೀಕರಿಸಿ ಕ್ರಮವಹಿಸಲಾಗಿರುತ್ತದೆ.

**ಸಂಖ್ಯೆ:ಇಪಿ 39 ಎಸ್‌ಟಿಬಿ 2026**

**(ಎಸ್.ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು